# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾಲೂಕು ಇದರ ತ್ರೈಮಾಸಿಕ ನ್ಯೂಸ್‌ಲೆಟರ್

ಸಂಪುಟ : 4 | ಸಂಚಿಕೆ : 1

ಜನವರಿ–ಮಾರ್ಚ್ 2022

ಕಛೇರಿ : ಸೇವಾನಿಕೇತನ, ಕನ್ಯಾಡಿ ॥, ಧರ್ಮಸ್ಥಳ ಅಂಚೆ ಮತ್ತು ಗ್ರಾಮ, ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ, ಕರ್ನಾಟಕ – 574 216


## ನಮ್ಮಿಂದಿಷ್ಟು

ನಮ್ಮ ಸೇವೆಯು ಸ್ಪಷ್ಟವಾಗುತ್ತಿದೆ. ಈ ಮೂರು ತಿಂಗಳಲ್ಲಿ ನಾವೆನಿಸಿದಂತೆ ಮಾಹಿತಿ ಕಾರ್ಯಾಗಾರಗಳು, ಆರೋಗ್ಯ ತಪಾಸಣಾ ಶಿಬಿರಗಳು ನಡೆದಿವೆ. ಅಗತ್ಯವಿರುವ ಧನ ಕ್ರೋಡೀಕರಣಕ್ಕಾಗಿ ಭೇಟಿಗಳನ್ನು ಮಾಡಿರುತ್ತೇವೆ. ನಮ್ಮ ಪೋಷಕರುಗಳೂ ಸೇವಾಧಾಮಕ್ಕೆ ಭೇಟಿ ನೀಡಿರುವುದು ನಮ್ಮ ಶಕ್ತಿಗೆ ಆನೆಬಲ ತುಂಬಿದಂತಾಗಿದೆ.

ಸೇವಾ ಸ್ಪಷ್ಟತೆಗಾಗಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಕಾರ್ಯಾಲಯ ಪ್ರಾರಂಭಿಸಲು ಭರದ ಸಿದ್ಧತೆಯಲ್ಲಿದ್ದೇವೆ. ಫಲಾನುಭವಿಗಳ ಸೇವೆಗಳ ಹಸ್ತಾಂತರ ಈ ಮೂರು ತಿಂಗಳಲ್ಲಿ ನಿರಂತರ ನಡೆದಿದೆ ಎನ್ನುವುದು ನಮ್ಮೆಲ್ಲರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಎಂದು ಸರ್ವವೇದ್ಯವಾಗಿ ಗೋಚರಿಸುತ್ತದೆ.

ಒಟ್ಟಿನಲ್ಲಿ ಸೇವಾಕಾರ್ಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಸು ವೇಗ ಪಡೆದುಕೊಳ್ಳುತಿರುವುದು ಮತ್ತು ಉತ್ತರಕನ್ನಡ ಜಿಲ್ಲೆಗೆ ಮುಂದಿನ ತಿಂಗಳಲ್ಲಿ ಪಾದಾರ್ಪಣೆ ಮಾಡುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ.

“ಸೇವಾ ಹಿ ಪರಮೋ ಧರ್ಮ”ದ ಅನುಷ್ಠಾನವು ಸೇವಾಪಥದ ಮೂಲಕ ತಮ್ಮ ಕೈಗೂ ತಲುಪುವ ಪ್ರಯತ್ನವಿದು. ಇನ್ನು ನಮ್ಮನ್ನು ಹರಸಿ, ಹಾರೈಸಿ, ಕೈ ಜೋಡಿಸುವುದು ತಮಗೆ ಬಿಟ್ಟಿದ್ದು.

ತಮ್ಮವ,

ಕನ್ಯಾಡಿ ವಿನಾಯಕ ರಾವ್

## ಸೇವಾಧಾಮದ ಸನಿವಾಸಿಗಳೊಂದಿಗೆ ಹುಟ್ಟುಹಬ್ಬ ಆಚರಣೆ




ನಮ್ಮ ಸಂಸ್ಥೆಯ ಪೋಷಕರಾದ ರೊ। ಯಶವಂತ ಪಟವರ್ಧನ್ ರವರು ತಮ್ಮ ಧರ್ಮಪತ್ನಿಯೊಂದಿಗೆ ಜನವರಿ 1ರಂದು ಸೇವಾಧಾಮಕ್ಕೆ ಭೇಟಿ ನೀಡಿದರು. ಕೇಂದ್ರದ ಸನಿವಾಸಿಗಳೊಂದಿಗೆ ತಮ್ಮ ಹುಟ್ಟುಹಬ್ಬವನ್ನು ಆಚರಿಸಿದರು. ಸೇವಾಧಾಮದ ಚಟುವಟಿಕೆಗಳಿಗೆ ರೂ. 10,000/– ದೇಣಿಗೆ ನೀಡಿದರು. ಕೇಂದ್ರದ ಮೆಂಟರ್ ಬಾಲಕೃಷ್ಣರವರು ಅವರನ್ನು ಸ್ವಾಗತಿಸಿ ಶುಭಕೋರಿದರು.

## ಸೇವಾಧಾಮಕ್ಕೆ ಸಂಸ್ಥೆಯ ಮಹಾ ಪೋಷಕರ ಭೇಟಿ



ನಮ್ಮ ಸಂಸ್ಥೆಯ ಮಹಾ ಪೋಷಕರಾದ ACE ಮ್ಯಾನುಫ್ಯಾಕ್ಚರಿಂಗ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇದರ ಮ್ಯಾನೇಜಿಂಗ್ ಡೈರೆಕ್ಟರ್ ಆದ ಪಿ. ರಾಮದಾಸ್‌ರವರು ಜನವರಿ 6ರಂದು ಸಂಸ್ಥೆಗೆ ಭೇಟಿ ನೀಡಿದರು. ಅವರಿಗೆ ಸೇವಾಧಾಮದ ಕಾರ್ಯಚಟುವಟಿಕೆಗಳನ್ನು ತಿಳಿಸಲಾಯಿತು. ಸಾಂಕೇತಿಕವಾಗಿ ಫಲಾನುಭವಿಗಳಿಗೆ ಗಾಲಿಕುರ್ಚಿಗಳನ್ನು ಹಸ್ತಾಂತರಿಸಲಾಯಿತು

ಮತ್ತು ಸಂಸ್ಥೆಗೆ ಸಿ ಎಸ್ ಆರ್ ನಿಧಿ ರೂ 12,00,000/– ನೀಡಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಕೆ ವಿನಾಯಕ ರಾವ್, ಸೇವಾಧಾಮದ ಸಂಚಾಲಕರಾದ ಕೆ.ಪುರಂದರ ರಾವ್, ಮೆಂಟರ್ ಬಾಲಕೃಷ್ಣ, ಸನಿವಾಸಿಗಳು, ಪೋಷಕರು ಹಾಗೂ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

## ಸೇವಾಧಾಮಕ್ಕೆ ಬೆಂಗಳೂರಿನ Giftabled Foundationನ ಪ್ರಾಜೆಕ್ಟ್ ಮ್ಯಾನೇಜರ್ ದೀಕ್ಷಿತಾ ಭೇಟಿ



ನಮ್ಮ ಸಂಸ್ಥೆಗೆ ಸ್ವಉದ್ಯೋಗ ಯೋಜನೆಯಡಿ 35 ಮಂದಿ ಬೆನ್ನುಹುರಿ ಅಪಘಾತದ ದಿವ್ಯಾಂಗರಿಗೆ ಜೇನುಕೃಷಿಯನ್ನು ದೊರಕಿಸಿರುವ Giftabled Foundationನ Project Manager ದೀಕ್ಷಿತಾ ರವರು ಜನವರಿ 13ರಂದು ಕೇಂದ್ರಕ್ಕೆ ಭೇಟಿ ನೀಡಿ ಸನಿವಾಸಿಗಳಿಗೆ ಸ್ವಉದ್ಯೋಗದ ಅರಿವನ್ನು ನೀಡಿದರು. ಆ ನಂತರ ಸೇವಾನಿಕೇತನಕ್ಕೂ ಭೇಟಿ ನೀಡಿ ಸಿಬ್ಬಂದಿಗಳು ಹಾಗೂ ಮಂಡಳಿಯ ಸದಸ್ಯರೊಂದಿಗೆ ಮುಂದಿನ ಯೋಜನೆ ಮತ್ತು ಅನುಷ್ಠಾನದ ಬಗ್ಗೆ ಮಾತುಕತೆ ನಡೆಸಿದರು.

## ಶುಭವಿವಾಹದ ಸಂದರ್ಭದಲ್ಲಿ ಸೇವಾಧಾಮಕ್ಕೆ ಕೊಡುಗೆ



ಜನವರಿ 20ರಂದು ಕೊಕ್ಕಡ ಗ್ರಾಮದ ಗಣೇಶ್ ಕಲಾಯಿ, ಇವರು ತಮ್ಮ ಶುಭವಿವಾಹದ ಸಂದರ್ಭದಲ್ಲಿ ಸೇವಾಧಾಮಕ್ಕೆ ಅಗತ್ಯವಿರುವ ಒಟ್ಟು ರೂ.30,000/– ಮೌಲ್ಯದ ಗಾಲಿಕುರ್ಚಿ ಮತ್ತು ಥೆರಪಿ ಬಾಲ್ ಹಾಗೂ static cycle ಗಳನ್ನು ಕೊಡುಗೆಯಾಗಿತ್ತರು. ಕೊಡುಗೆಯನ್ನು ಸ್ವೀಕರಿಸಿದ ಸೇವಾಭಾರತಿ ಅಧ್ಯಕ್ಷರು ದಾನಿಗಳಿಗೆ ಕೃತಜ್ಞತೆ ವ್ಯಕ್ತಪಡಿಸಿ ಶುಭ ಹಾರೈಸಿದರು. RSS ಮುಖಂಡರಾದ ಡಾ. ಕೆ.ಪ್ರಭಾಕರ ಭಟ್, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.) ಕೊಕ್ಕಡ ಇದರ ಅಧ್ಯಕ್ಷರಾದ ಶ್ರೀ ಕೃಷ್ಣ ಭಟ್ ಕೊಕ್ಕಡ ಹಾಗೂ ಗಣೇಶರವರ ಕುಟುಂಬದವರು ಉಪಸ್ಥಿತರಿದ್ದರು.

## ಸೇವಾಧಾಮದಲ್ಲಿ ಸ್ವ ಉದ್ಯೋಗ ತರಬೇತಿ



ಜನವರಿ 23ರಂದು ಸ್ವ ಉದ್ಯೋಗದ ಯೋಜನೆಯಡಿ ನಾಗರಾಜ್, ಭಾಗ್ಯ ನಾಯಕ್ ಹಾಗೂ ದಿವ್ಯಾರವರು ಸೇವಾಧಾಮಕ್ಕೆ ಆಗಮಿಸಿ, ಸನಿವಾಸಿಗಳಿಗೆ ಹಾಗೂ ಪೋಷಕರಿಗೆ ಅಲಂಕಾರಿಕ ಮಾಲೆ ತಯಾರಿಯ ತರಬೇತಿ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸ್ವರ್ಣಗೌರಿ ಉಪಸ್ಥಿತರಿದ್ದರು.

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ 2 ದಿನಗಳ ಉಚಿತ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮ



ಜನವರಿ 27 ಹಾಗೂ 28 ರಂದು ಕಾರ್ಕಳ ತಾಲೂಕಿನಲ್ಲಿರುವ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರಿಗೆ 2 ದಿನಗಳ ಆರೋಗ್ಯ ತಪಾಸಣೆ ಹಾಗೂ ಮಾಹಿತಿ ಶಿಬಿರವನ್ನು ಕಾರ್ಕಳದ Dr. T.M.A Pai Rotary Hospital ನ ಸಹಕಾರದಲ್ಲಿ ಹಾಗೂ ಕಾರ್ಕಳದ Rotary clubಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗಿತ್ತು. ಉದ್ಘಾಟಕರಾಗಿ ಪಾಸ್ಟ್ ಡಿಸ್ಟ್ರಿಕ್ಟ್ ಗವರ್ನರ್ ಆದ ರೊ। ಡಾ. ಭರತೇಶ ಕೆ. ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ. ಸುರೇಶ್ ನಾಯಕ್, ರೊ। ಡಾ. ಕೀರ್ತಿನಾಥ ಬಲ್ಲಾಳ್, ರೊ। ಹರಿಪ್ರಕಾಶ್ ಶೆಟ್ಟಿ, ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಹಾಗೂ ಸೇವಾಧಾಮದ ನಿರ್ದೇಶಕರಾದ ರಾಯನ್ ಫರ್ನಾಂಡಿಸ್ ಉಪಸ್ಥಿತರಿದ್ದರು. ಒಟ್ಟು 8 ಮಂದಿ ಫಲಾನುಭವಿಗಳಿಗೆ 2 ದಿನಗಳ ಕಾಲ ವಿವಿಧ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಮತ್ತು ತರಬೇತಿಯನ್ನು ನೀಡಲಾಯಿತು.ಅಲ್ಲದೆ ಸಮಾರೋಪ ಸಮಾರಂಭಕ್ಕೆ ಜಿಲ್ಲೆಯ ರೋಟರಿ ಗವರ್ನರ್

ರೊ। ರಾಮಚಂದ್ರಮೂರ್ತಿ, ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಚಿದಾನಂದ ಕುಲಕರ್ಣಿ, ಸಹಾಯಕ ಗವರ್ನರ್ ರೊ। ಅರುಣ್ ಹೆಗ್ಡೆ ಹಾಗೂ ಸೇವಾಧಾಮದ ಸಂಚಾಲಕರಾದ ಕೆ. ಪುರಂದರ ರಾವ್ ಉಪಸ್ಥಿತರಿದ್ದರು. ರೋಟರಿ ಕ್ಲಬ್‌ನ ಕಾರ್ಯದರ್ಶಿ ಇಕ್ಬಾಲ್ ಕಾರ್ಯಕ್ರಮ ನಿರೂಪಿಸಿ, ಸಿಬ್ಬಂದಿಯಾದ ಮನು ವಂದಿಸಿದರು.

## ಸುಳ್ಯ ಮುತ್ತೂಟ್ ಫೈನಾನ್ಸ್ ಸಂಸ್ಥೆಗೆ ಭೇಟಿ



ಮುತ್ತೂಟ್ ಫೈನಾನ್ಸ್, ಸುಳ್ಯ ಕ್ಕೆ ನಮ್ಮ ಸಂಸ್ಥೆಯ ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್ ಹಾಗೂ ಕ್ಷೇತ್ರ ಸಂಯೋಜಕ ಅಖಿಲೇಶ್.ಎ ರವರು ಜನವರಿ 27 ರಂದು ಭೇಟಿ ನೀಡಿ ಸಂಸ್ಥೆಯ ಬಗ್ಗೆ ಮಾಹಿತಿ ನೀಡಿದರು. ಸಂಸ್ಥೆಯ ನಿರ್ವಹಣೆಗಾಗಿ ಆರ್ಥಿಕ ಸಹಕಾರಕ್ಕಾಗಿ ಮನವಿಯನ್ನು ಈ ಸಂದರ್ಭದಲ್ಲಿ ಸಲ್ಲಿಸಲಾಯಿತು.

## ನಿಧಿ ಸಂಗ್ರಹ ಪೆಟ್ಟಿಗೆ ಹಸ್ತಾಂತರ

ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗಾಗಿ ಧನಸಂಗ್ರಹ ಯೋಜನೆಯಡಿ ನಿಧಿ ಸಂಗ್ರಹ ಪೆಟ್ಟಿಗೆಯನ್ನು ನಮ್ಮ ಹಿತೈಷಿ, ದಾನಿಗಳೂ ಆದ ಮಂಗಲ್ ಸ್ಟೋರ್ ನ ಮಾಲಿಕರಾದ ಹಾಗು ನಮ್ಮ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಕೆ ರಾಘವೇಂದ್ರ ನಾಯಕ್ ಬರ್ಗುಳ ಇವರಿಗೆ ಹಸ್ತಾಂತರಿಸಲಾಯಿತು.

## ಬೆನಕ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ



ಬೆನಕ ಆಸ್ಪತ್ರೆಯ ಸಹಕಾರ ಹಾಗೂ ಬೆಳ್ತಂಗಡಿ ತಾಲೂಕಿನ ರೋಟರಿ ಆನ್ಸ್ ಕ್ಲಬ್ ನೇತೃತ್ವದಲ್ಲಿ, ರೋಟರಿ ಕ್ಲಬ್ ಬೆಳ್ತಂಗಡಿ, ಸೇವಾಭಾರತಿ ಕನ್ಯಾಡಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಬೆನಕ ಹೆಲ್ತ್ ಸೆಂಟರ್ ಉಜಿರೆಯಲ್ಲಿ ಜನವರಿ 28ರಂದು ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಮಂಗಳೂರಿನ Indian Red cross society, ಸರಕಾರಿ ಲೇಡಿಘೋಶನ್ ಆಸ್ಪತ್ರೆಯ ಸಹಕಾರದಲ್ಲಿ ಒಟ್ಟು 50 ಯೂನಿಟ್ ರಕ್ತ ಸಂಗ್ರಹಿಸಲಾಯಿತು.

## ಸೇವಾನಿಕೇತನದಲ್ಲಿ ಜೇನುಕೃಷಿ ತರಬೇತಿ

ಜನವರಿ 31ರಂದು ಸ್ವಉದ್ಯೋಗ ಯೋಜನೆಯಡಿ ಫಲಾನುಭವಿಗಳಿಗೆ ಒಂದು ದಿನದ ಜೇನು ಕೃಷಿ ತರಬೇತಿಯನ್ನು ಕನ್ಯಾಡಿಯ ಸೇವಾನಿಕೇತನದಲ್ಲಿ ಆಯೋಜಿಸಲಾಯಿತು. ತರಬೇತುದಾರರಾಗಿ ಶಶಿಧರ್ ಮತ್ತಿಲರವರು ಜೇನುಕೃಷಿಯ ಪ್ರಯೋಜನ, ವಿವಿಧ ತಳಿಗಳು, ಜೇನು ಪರಿಕರಗಳ ಅಳವಡಿಸುವಿಕೆಯ ವಿಧಾನ, ಜೇನು ಸಂಗ್ರಹ



ಹಾಗೂ ಜೇನು ಉತ್ಪನ್ನಗಳ ಮಾರುಕಟ್ಟೆ ಬಗ್ಗೆ ತರಬೇತಿ ನೀಡಿದರು. ತರಬೇತಿಯಲ್ಲಿ ಒಟ್ಟು 11 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು. ಸಂಸ್ಥೆಯ ಪ್ರಬಂಧಕರಾದ ಮೋಹನ್ ಎಸ್ ಹಾಗೂ Livelihood Co-ordinator ಅಖಿಲೇಶ್ ಎಸ್ ಉಪಸ್ಥಿತರಿದ್ದರು.

## ಸ್ಪಂದನ ಹೀರೋಸ್ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಕೆ. ವಿನಾಯಕ ರಾವ್




ಸ್ಪಂದನ ಹೀರೋಸ್ ಮಾಲಿಕೆಯಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ವಿನಾಯಕ ರಾವ್ ರವರು ಫೆಬ್ರವರಿ 3ರಂದು ಭಾಗವಹಿಸಿ, ಸೇವಾ ಭಾರತಿಯ ಕಾರ್ಯಚಟುವಟಿಕೆಗಳು, ಸೇವಾಧಾಮದ ಕಾರ್ಯವ್ಯಾಪ್ತಿ ಮತ್ತು ಯೋಜನೆಗಳನ್ನು ಸವಿವರವಾಗಿ ತಿಳಿಸಿದರು. ಮಾರ್ಮಿಕವಾಗಿ ಬಿತ್ತರಗೊಂಡ ಈ ಕಾರ್ಯಕ್ರಮ ಬೆನ್ನುಹುರಿ ಅಪಘಾತದ ಹಾಗೂ ನಿಯಂತ್ರಣದ ಬಗ್ಗೆ ಬೆಳಕು ಚೆಲ್ಲಲು ಸಾಧ್ಯವಾಯಿತು.

## ತರಿಕೆರೆ ತಾಲೂಕಿನಲ್ಲಿ ಮಾಹಿತಿ ಮತ್ತು ತರಬೇತಿ ಕಾರ್ಯಾಗಾರ



ಫೆಬ್ರವರಿ 4ರಂದು ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲೂಕಿನ ಎಲ್ಲಾ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗಾಗಿ ಬೆನ್ನುಹುರಿ ಅಪಘಾತ, ಅದರ ಗುರುತಿಸುವಿಕೆ ಮತ್ತು ನಿರ್ವಹಣೆಯ ಬಗ್ಗೆ ಸಂಸ್ಥೆಯ ಕಾರ್ಯಕ್ರಮ ಸಂಯೋಜಕರಾದ ಅಶ್ರಿತ್ ರವರು ಮಾಹಿತಿ ಮತ್ತು ತರಬೇತಿಯನ್ನು ನೀಡಿದರು. ಈ ಸಂದರ್ಭದಲ್ಲಿ MRW ಅಕ್ರಮ್, ಕ್ಷೇತ್ರ ಸಂಯೋಜಕರಾದ ಮನು. ಆರ್ ರವರು ಉಪಸ್ಥಿತರಿದ್ದರು.

## ಸೇವಾಧಾಮಕ್ಕೆ ಗಣ್ಯರ ಭೇಟಿ



ಸೇವಾಧಾಮದ ಕಾರ್ಯಚಟುವಟಿಕೆಗಳು ಮತ್ತು ನಿರಂತರತೆಗಾಗಿ ಸಂಸ್ಥೆಗೆ ಆಗಮಿಸುವಂತೆ ನೀಡಿದ ಮನವಿಗೆ ಸ್ಪಂದಿಸಿದ ಗಣ್ಯರು ಫೆಬ್ರವರಿ 4ರಂದು ಸೇವಾಧಾಮ ಕೇಂದ್ರಕ್ಕೆ ಭೇಟಿ ನೀಡಿದರು. ತಾಲೂಕಿನ ಶಾಸಕರಾದ ಹರೀಶ್ ಪೂಂಜಾ, ಮಾಣಿಲ ಶ್ರೀ ಶ್ರೀ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿಗಳು, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.) ಕೊಕ್ಕಡ ಇದರ ಅಧ್ಯಕ್ಷರಾದ ಕೆ. ಕೃಷ್ಣ ಭಟ್, ಹತ್ಯಡ್ಕ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಕೆ. ರಾಘವೇಂದ್ರ ನಾಯಕ್ ಬರ್ಗುಳ, ಕೊಕ್ಕಡ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ದಿನೇಶ್ ಆಲಂಬಿಲ, ರಾಜ್ಯ ಧಾರ್ಮಿಕ ಪರಿಷತ್‌ನ ಸದಸ್ಯರಾದ ಕಶೆಕೋಡಿ ಸೂರ್ಯನಾರಾಯಣ ಭಟ್‌ರವರು ಭೇಟಿ ನೀಡಿದರು. ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಸೇವಾಧಾಮದ ಬಗ್ಗೆ ಮಾಹಿತಿ ನೀಡಿದರು ಹಾಗೂ ಕೃತಜ್ಞತೆ ವ್ಯಕ್ತಪಡಿಸಿ ಸಹಾಯ ನೀಡುವಂತೆ ಮನವಿ ಮಾಡಿದರು.

## ಬೆಳ್ತಂಗಡಿ ತೋಟಗಾರಿಕಾ ಇಲಾಖೆಗೆ ಭೇಟಿ

ಫೆಬ್ರವರಿ 4ರಂದು ಬೆಳ್ತಂಗಡಿ ತಾಲೂಕಿನ ತೋಟಗಾರಿಕಾ ಇಲಾಖೆಯ ಅಧಿಕಾರಿಯವರನ್ನು ಭೇಟಿ ಮಾಡಿ ಬೆನ್ನುಹುರಿ ಮುರಿತಕ್ಕೊಳಗಾದ ದಿವ್ಯಾಂಗರಿಗಾಗಿ ಮೀಸಲಿರುವ ಅವಕಾಶಗಳು ಮತ್ತು ಸೌಲಭ್ಯಗಳ ಕುರಿತು ಸಂಸ್ಥೆಯ Livelihood co-ordinator ಅಖಿಲೇಶ್. ಎಸ್ ಮಾಹಿತಿ ಪಡೆದರು.

## ಸೇವಾಧಾಮದಲ್ಲಿ ಸಿಬ್ಬಂದಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ



ಫೆಬ್ರವರಿ 5ರಂದು ಸೇವಾಧಾಮದಲ್ಲಿ ಸಿಬ್ಬಂದಿಗಳಿಗೆ ಸಾಮರ್ಥ್ಯಭಿವೃದ್ಧಿ ತರಬೇತಿ ಹಾಗೂ ಸನಿವಾಸಿಗಳಿಗೆ ಆಪ್ತಸಮಾಲೋಚನೆಯನ್ನು ಸಂಪನ್ಮೂಲ ವ್ಯಕ್ತಿ ಶ್ರೀಮತಿ ಮಂಜುಳಾ ರವರು ನಡೆಸಿಕೊಟ್ಟರು.

## ಆರೋಗ್ಯಬಿಂದು ಕಾರ್ಯಕ್ರಮ ಉದ್ಘಾಟನೆ




ಫೆಬ್ರವರಿ 7 ಮುಂಡಾಜೆಯ ಸುಜಿತ್ ಭಿಡೆ ಅವರು ತಮ್ಮ ಧರ್ಮಪತ್ನಿ ಸಹನಾ ಭಿಡೆಯೊಂದಿಗೆ ಕನ್ಯಾಡಿಯ ಸೇವಾಭಾರತಿ ಕಾರ್ಯಾಲಯ ಸೇವಾನಿಕೇತನಕ್ಕೆ ಆಗಮಿಸಿ ತಮ್ಮ ಹುಟ್ಟುಹಬ್ಬವನ್ನು ವಿಶಿಷ್ಟವಾಗಿ ಆಚರಿಸಿದರು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ತಮ್ಮ ಆರ್ಥಿಕ ಹೊರೆಯನ್ನು ಕಡಿಮೆಗೊಳಿಸುವ ಉದ್ದೇಶದಿಂದ ಅತಿ ಕಡಿಮೆ ದರದಲ್ಲಿ ಅವರಿಗೆ ಅಗತ್ಯವಿರುವ ವೈದ್ಯಕೀಯ ವಸ್ತುಗಳನ್ನು ಅವರ ಮನೆಬಾಗಿಲಿಗೆ ತಲುಪಿಸುವ ಯೋಜನೆಯಾದ ಆರೋಗ್ಯಬಿಂದು ಕಾರ್ಯಕ್ರಮವನ್ನು ಉದ್ಘಾಟಿಸಿದರು ಹಾಗೂ ಈ ಯೋಜನೆಗೆ ರೂ. 25,000/– ಧನ ಸಹಾಯ ನೀಡಿದರು. ಕಾರ್ಯಕ್ರಮದಲ್ಲಿ ಸೇವಾಭಾರತಿಯ ಅಧ್ಯಕ್ಷ ಕೆ ವಿನಾಯಕ ರಾವ್ ಹಾಗೂ ಸೇವಾಭಾರತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಚರಣ್ ಕುಮಾರ್ ಕಾರ್ಯಕ್ರಮ ನಿರೂಪಿಸಿ ಅಕ್ಷತಾ ಭಟ್ ಧನ್ಯವಾದವಿತ್ತರು.

## ಮಾಹಿತಿ ಶಿಬಿರ ಮತ್ತು ಅರಿವು ಕಾರ್ಯಾಗಾರ




ಫೆಬ್ರವರಿ 9ರಂದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ರೋಟರಿ ಕ್ಲಬ್ ಸದಸ್ಯರಿಗಾಗಿ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಮತ್ತು ಅದರ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಸಂಸ್ಥೆಯ ಕಾರ್ಯಕ್ರಮ ಸಂಯೋಜಕರಾದ ಆಶ್ರಿತ್ ಸಿ. ಪಿ. ರವರು ಅರಿವು ಮೂಡಿಸಿದರು. ಸಂಸ್ಥೆಯ ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್, ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ। ಸುಧಾಕರ್ ಹಾಗೂ ಕಾರ್ಯದರ್ಶಿ ರೊ। ಪ್ರಸಾದ್ ಉಪಸ್ಥಿತರಿದ್ದರು.

## ಸೇವಾಧಾಮಕ್ಕೆ ರಿಸರ್ಚ್ ಸ್ಕಾಲರ್‌ರವರ ಭೇಟಿ

ಮಾಹೆ ಯುನಿವರ್ಸಿಟಿಯ ರಿಸರ್ಚ್ ಸ್ಕಾಲರ್ ಆದ ಆಶಾಲತಾರವರು ಫೆಬ್ರವರಿ 14ರಂದು ಸೇವಾಧಾಮಕ್ಕೆ ಭೇಟಿ ನೀಡಿ ಸನಿವಾಸಿಗಳ ದಿನನಿತ್ಯದ ಚಟುವಟಿಕೆಗಳನ್ನು ದಾಖಲೀಕಾರಣ ಮಾಡಿ ಆ ಮೂಲಕ ಅವರಿಗೆ ಮುಂದಿನ ಉತ್ತಮ ಭವಿಷ್ಯ ರೂಪಿಸಲು ಮಾರ್ಗದರ್ಶನ ನೀಡಿದರು. ಮತ್ತು ಈ ಉದ್ದೇಶಕ್ಕಾಗಿ ರೂ. 5000/- ದೇಣಿಗೆ ನೀಡಿದರು.

## ಸೇವಾಧಾಮಕ್ಕೆ ಮೈಸೂರಿನ JSS ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಭೇಟಿ

ಸೇವಾಧಾಮ ಕೇಂದ್ರ ಹಾಗೂ ಸಮುದಾಯದಲ್ಲಿ ವಿಸ್ತರಿತ ಸೇವೆಗಳಿಗಾಗಿ ಮೈಸೂರಿನ JSS ಕಾಲೇಜಿನ ಫಿಸಿಯೋಥೆರಪಿ ವಿಭಾಗದೊಂದಿಗೆ ಒಡಂಬಡಿಕೆ ಪತ್ರ ವಿನಿಮಯ ಮಾಡಿಕೊಳ್ಳುವುದರ ಬಗ್ಗೆ JSS ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಸಂದೀಪ್ ಪಿ.ಹೆಚ್ ಕೇಂದ್ರಕ್ಕೆ ಭೇಟಿ ನೀಡಿ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿದರು. ಎರಡು ದಿನಗಳಲ್ಲಿ ಫಲಾನುಭವಿಗಳನ್ನು ಭೇಟಿ ಮಾಡಿ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಿದರು.

## ಸೇವಾಭಾರತಿ 17 ನೇ ವಾರ್ಷಿಕ ಸಂಭ್ರಮ



ಫೆಬ್ರವರಿ 25 ರಂದು ಕನ್ಯಾಡಿ ಹಿರಿಯ ಪ್ರಾಥಮಿಕ ಶಾಲಾ ಸಭಾಭವನದಲ್ಲಿ ಬೆಳ್ತಂಗಡಿ ತಾಲೂಕು ಸೇವಾಭಾರತಿಯ 17ನೇ ವಾರ್ಷಿಕ ಸಂಭ್ರಮದಲ್ಲಿ ವಿವಿಧ ಸೇವಾ ಕಾರ್ಯಗಳ ಹಸ್ತಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಮನೆ ಮನೆಗಳಿಗೆ ತೆರಳಿ ಚಿಕಿತ್ಸೆ ನೀಡುವ ಸೇವಾ ಕಾರ್ಯ ಬೇರೆ ಯಾವ ಜಿಲ್ಲೆಯಲ್ಲೂ ಇಲ್ಲ. ಸೇವಾಧಾಮದ ಸೇವಾಕಾರ್ಯ ಆರು ಜಿಲ್ಲೆಗಳಿಗೆ ವಿಸ್ತರಿಸುತ್ತಿರುವುದು ಶ್ಲಾಘನೀಯವೆಂದರು. ಸೆಲ್ಕೋ ಸಂಸ್ಥೆಯ ಸೀನಿಯರ್ ಮ್ಯಾನೇಜರ್ ಸಂಜಿತ್ ರೈ ಗ್ರಾಮೀಣ ಭಾಗದ ಜನರಿಗೆ ನಿಸ್ವಾರ್ಥ ಸೇವೆ ಮಾಡುತ್ತಿರುವ ಸೇವಾಭಾರತಿಗೆ ಸೆಲ್ಕೋ ಸಂಸ್ಥೆ ಮುಂದೆಯೂ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳು 5 ಜನ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ವೀಲ್ ಚೇರ್, ಇಬ್ಬರಿಗೆ ವಾಕರ್, ಒಬ್ಬರಿಗೆ ಇನ್ವರ್ಟರ್, ಹಾಗೂ ಒಬ್ಬರಿಗೆ ಟೈಲರಿಂಗ್ ಮೆಷೀನ್, ಇಬ್ಬರಿಗೆ ಜೇನು ಸಾಕಣೆಗೆ ಹಾಗೂ ಇಬ್ಬರಿಗೆ ಶೌಚಾಲಯ ನಿರ್ಮಾಣಕ್ಕೆ ಆರ್ಥಿಕ ನೆರವು ಹಸ್ತಾಂತರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸೇವಾಭಾರತಿ ಅಧ್ಯಕ್ಷ ಕೆ ವಿನಾಯಕ ರಾವ್ ಪ್ರಸ್ತಾವಿಸಿ ಸೇವಾಭಾರತಿ ನಡೆದು ಬಂದ ದಾರಿ ಹಾಗೂ ನೆರವಾದ ಸಂಘ ಸಂಸ್ಥೆಗಳ ಸಹಕಾರವನ್ನು ಸ್ಮರಿಸಿ ಮುಂದಿನ ಯೋಜನೆಗಳಿಗೆ ಎಲ್ಲರ ಸಹಕಾರ ಕೋರಿದರು.

ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಕೃಷ್ಣ ಭಟ್ ಮುಂದಿನ ಹೊಸ ಪೀಳಿಗೆಗೆ ಸಂಸ್ಕಾರ ನೀಡಿ ಪರೋಪಕಾರದಿಂದ ತಾಯಿ ಭಾರತೀಯ ಸೇವೆ ಮಾಡಿ ರಾಷ್ಟ್ರ ಸೇವೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಣೆಯಾಗಬೇಕೆಂದರು. ಮೈಸೂರು ಜೆ.ಎಸ್.ಎಸ್ ಫಿಸಿಯೋಥೆರಫಿ ಕಾಲೇಜಿನ ಸಹಾಯಕ ಪ್ರೊಫೆಸರ್ ಡಾ. ಸಂದೀಪ್ ಪಿ.ಎಚ್ ಸೇವಾಭಾರತಿಯ ಪುನಶ್ಚೇತನ ಕೇಂದ್ರ ಹಾಗೂ ಸಮುದಾಯಾಧಾರಿತ ವಿಸ್ತರಿತ ಸೇವೆಗಳಿಗೆ ಒಡಂಬಡಿಕೆ ಪತ್ರವನ್ನು ಸೇವಾಭಾರತಿ ಅಧ್ಯಕ್ಷ ಕೆ ವಿನಾಯಕ ರಾವ್ ಅವರೊಂದಿಗೆ ವಿನಿಮಯ ಮಾಡಿಕೊಂಡು ತಮ್ಮ ಕಾಲೇಜಿನಿಂದ ನೆರವು ನೀಡುವುದಾಗಿ ಹೇಳಿದರು. ಉಜಿರೆ ಎಸ್. ಡಿ. ಎಂ ನ್ಯಾಚುರೋಪತಿ ಕಾಲೇಜಿನ ಯೋಗ ಉಪನ್ಯಾಸಕಿ ಡಾ. ಸುಜಾತ ಸರಳಾಯ ಅವರು ಬೆನ್ನುಮೂಳೆ ಮುರಿತಕ್ಕೊಳಗಾದವರ ಮೇಲೆ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯಿಂದ ಹೃದಯ ಬಡಿತದ ಪರಿಣಾಮದ ಕುರಿತಾದ ಸಂಶೋಧನಾ ಅಧ್ಯಯನದ ಬೆಳವಣಿಗೆ ಕುರಿತು ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಂದ ಭಟ್ ಶುಭಾಶಂಸನೆಗೈದರು. ರಕ್ತನಿಧಿ ವಿಭಾಗದ ಶ್ರೀಧರ ಕೆ. ವಿ ಉಪಸ್ಥಿತರಿದ್ದರು. ಫಲಾನುಭವಿಗಳು ತಯಾರಿಸಿದ ಜೇನುತುಪ್ಪ, ಹತ್ತಿಯಿಂದ ತಯಾರಿಸಿದ ಬತ್ತಿ ಹಾಗೂ ತಂಪುಪಾನೀಯದ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಲಾಗಿತ್ತು. ಸೇವಾಭಾರತಿ ಕಾರ್ಯದರ್ಶಿ ಸ್ವರ್ಣಗೌರಿ ಸ್ವಾಗತಿಸಿ, ಉಪನ್ಯಾಸಕ ಶಿವಪ್ರಸಾದ್ ನಿರೂಪಿಸಿ, ರಾಯನ್ ಫೆರ್ನಾಂಡಿಸ್ ಸಿಬ್ಬಂದಿಗಳನ್ನು ಪರಿಚಯಿಸಿ, ಸಿಬ್ಬಂದಿ ಜೋಸ್ಫಿನಾ ವಂದಿಸಿದರು. ಉಪಾಧ್ಯಕ್ಷ ಗಿರೀಶ್ ರಾವ್ ಮತ್ತು ಖಜಾಂಚಿ ಕೃಷ್ಣಪ್ಪ ಗುಡಿಗಾರ್ ಸಹಕರಿಸಿದರು. ಸೇವಾನಿಕೇತನ ಕಚೇರಿಯಲ್ಲಿ ಆಶ್ಲೇಷಾಬಲಿ ಹಾಗೂ ದುರ್ಗಾ ಪೂಜೆ ನಡೆಯಿತು.

## ಆರೋಗ್ಯ ಸ್ಪರ್ಶ ಯೋಜನೆಯಡಿ ಆರೋಗ್ಯ ತಪಾಸಣೆ




ಫೆಬ್ರವರಿ 28 ರಂದು ಉಡುಪಿ ಜಿಲ್ಲಾಡಳಿತದ ಮೂಲಕ ಆರೋಗ್ಯ ಸ್ಪರ್ಶ ಯೋಜನೆಯಡಿ 4 ಆಂಬುಲೆನ್ಸ್ ಗಳ ಮೂಲಕ 46 ಮಂದಿ ಬೆನ್ನು ಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಆರೋಗ್ಯ ತಪಾಸಣೆ ಮಾಡಲಾಯಿತು. ಒತ್ತಡ ಗಾಯಗಳ ನಿರ್ವಹಣೆ, ರಕ್ತದೊತ್ತಡ ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಪರೀಕ್ಷೆ ಮಾಡಲಾಯಿತು.

## ಧನಕ್ರೋಢೀಕರಣಕ್ಕಾಗಿ ಭೇಟಿ

ಸಂಸ್ಥೆಯ ಕಾರ್ಯವಿಸ್ತಾರಕ್ಕಾಗಿ ಮತ್ತು ಧನ ಕ್ರೋಢೀಕರಣ ಉದ್ದೇಶಕ್ಕಾಗಿ ಸಂಸ್ಥೆಯ ಅಧ್ಯಕ್ಷರಾದ ಕೆ ವಿನಾಯಕ ರಾವ್ ಹಾಗೂ ಫಂಡ್ ರೈಸಿಂಗ್ ಮ್ಯಾನೇಜರ್ ಆದ ಚರಣ್ ಕುಮಾರ್‌ರವರು ಮಾರ್ಚ್ 4 ರಂದು 1) ಮಂಗಳೂರಿನ ಕೆನರಾ ಚೇಂಬರ್ ಆಫ್ ಕಾಮರ್ಸ್ & ಇಂಡಸ್ಟ್ರಿಯ ಅಧ್ಯಕ್ಷರಾದ ಮೈತ್ರೇಯಿಯವರನ್ನು ಭೇಟಿ







ಮಾಡಿ ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು.

2) ರೋಟರಿ ಕ್ಲಬ್, ಕಾರ್ಕಳ ಇದರ ಪ್ರಮುಖರನ್ನು ಭೇಟಿ ನೀಡಿ ಉಡುಪಿ ಜಿಲ್ಲೆಯಲ್ಲಿ ನಡೆಸಲುದ್ದೇಶಿಸಿದ ಪುನಶ್ಚೇತನ ಕೇಂದ್ರಕ್ಕಾಗಿ ಸ್ಥಳ, ಕಟ್ಟಡ, ಮತ್ತು ಧನ ಕ್ರೋಢೀಕರಣಕ್ಕಾಗಿ ಮಾತುಕತೆ ನಡೆಸಲಾಯಿತು.

3) ತಿಂಗಳಿಗೊಮ್ಮೆ ಸೇವಾಧಾಮ ಕೇಂದ್ರಕ್ಕೆ ಭೇಟಿ ನೀಡಿ ಆರೋಗ್ಯತಪಾಸಣೆ ಮತ್ತು ಇತರೇ ಮಾಹಿತಿಗಳನ್ನು ನೀಡುವ ಒಡಂಬಡಿಕೆಯ ಕುರಿತು ಕೆ.ಎಂ.ಸಿ. ಯ P.M.R. ವಿಭಾಗದ ಡಾ ಮೈತ್ರೇಯಿ ಅವರೊಂದಿಗೆ ಮಾತುಕತೆ ನಡೆಸಲಾಯಿತು.

4) ಹೆರ್ಗ ದುರ್ಗಾ ಪರಮೇಶ್ವರಿ ದೇವಸ್ಥಾನದ ಬಳಿ ಉಡುಪಿ ಜಿಲ್ಲಾ ಕಾರ್ಯಾಲಯಕ್ಕೋಸ್ಕರ ಒಂದು ಮನೆಯ ಮಾಲೀಕರನ್ನು ಭೇಟಿ ಮಾಡಿ ಮನೆಯನ್ನು ಬಾಡಿಗೆಗೆ ಪಡಕೊಳ್ಳುವುದೆಂದು ತೀರ್ಮಾನಿಸಲಾಯಿತು.

## ಸೇವಾಧಾಮಕ್ಕೆ ರೋಟರಿ ಕ್ಲಬ್ ಶಂಕರಪುರ ಇದರ ಗಣ್ಯರ ಭೇಟಿ



ಸೇವಾಧಾಮ ಕೇಂದ್ರಕ್ಕೆ ರೋಟರಿ ಕ್ಲಬ್ ಶಂಕರಪುರದ ಸದಸ್ಯರು ಮಾರ್ಚ್ 7 ರಂದು ಭೇಟಿ ನೀಡಿದರು. ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ರವರು ಸೇವಾಧಾಮ ಪುನಶ್ಚೇತನ ಕೇಂದ್ರದ ಕಲ್ಪನೆ ಮತ್ತು ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ನೀಡಿದರು. ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್.ಎಂ ಸೇವಾಭಾರತಿಯ ಯೋಜನೆಯ ಬಗ್ಗೆ ವಿವರಿಸಿದರು. ರೋಟರಿ ಕ್ಲಬ್ ಶಂಕರಪುರದ ಗಣ್ಯರು ಸೇವಾಧಾಮದ ಸನಿವಾಸಿಗಳೊಂದಿಗೆ ಮಾತನಾಡಿ ಆರೋಗ್ಯದ ಬಗ್ಗೆ ವಿಚಾರಿಸಿ ಧೈರ್ಯ ತುಂಬಿದರು. ಸೇವಾಧಾಮಕ್ಕೆ ರೂ.35,000/– ಮೌಲ್ಯದ ಚೆಕ್ ನ್ನು ಹಸ್ತಾಂತರಿಸಿ ಮುಂದಿನ ದಿನಗಳಲ್ಲಿಯೂ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಉಡುಪಿ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯ ಭಾಗಶಃ ವೇತನ ರೂ. 15,000/– ಕ್ಕೆ ಮನವಿಯನ್ನು ಸಲ್ಲಿಸಲಾಯಿತು. ಈ ವೇಳೆ ರೋಟರಿ ಶಂಕರಪುರದ ಅಧ್ಯಕ್ಷರಾದ ರೊ. ಫ್ಲಾವಿಯ ಮಿನೇಜಸ್, ಕಾರ್ಯದರ್ಶಿ ಮಾಲಿನಿ ಶೆಟ್ಟಿ, ಜೋನಲ್ ಲೆಫ್ಟಿನೆಂಟ್ ಅನಿಲ್ ಡಿ ಸಾ, 12 ಮಂದಿ ರೋಟರಿ ಶಂಕರಪುರದ ಸದಸ್ಯರು ಮತ್ತು ಸೇವಾಧಾಮದ ನಿವಾಸಿಗಳು, ಅವರ ಪೋಷಕರು ಉಪಸ್ಥಿತರಿದ್ದರು. ಸೇವಾಧಾಮದ ಸಂಚಾಲಕರಾದ ಶ್ರೀಯುತ ಕೆ. ಪುರಂದರ ರಾವ್ ಸ್ವಾಗತಿಸಿದರು. ಸೇವಾಧಾಮದ ಕಾರ್ಯಕ್ರಮ ಸಂಯೋಜಕರಾದ ಆಶ್ರೀತ್ ಸಿ. ಪಿ. ರವರು ಧನ್ಯವಾದವಿತ್ತರು.

## ಸೇವಾಧಾಮಕ್ಕೆ LIC ತಂಡದಿಂದ ಭೇಟಿ



ಮಾರ್ಚ್ 9 ರಂದು ಸೇವಾಧಾಮ ಕೇಂದ್ರಕ್ಕೆ ಉಡುಪಿಯ LIC ಡಿವಿಷನಲ್ ಆಫೀಸ್‌ನ ಪ್ರಮುಖರು ಭೇಟಿ ನೀಡಿದರು. ಭೇಟಿಯ ಸಂದರ್ಭದಲ್ಲಿ ಸಿ. ವೆಂಕಟರಾಮನ್, ರೀಜಿನಲ್ ಮ್ಯಾನೇಜರ್ LIC ಇಂಡಿಯಾ, ದೇವಪ್ಪ ನಾಯಕ್, ಮ್ಯಾನೇಜರ್ LIC ಬೆಳ್ತಂಗಡಿ , ಉದಯ ಶಂಕರ್, ಡೆವಲಪ್ಮೆಂಟ್ ಆಫೀಸರ್ LIC ಬೆಳ್ತಂಗಡಿ, ಎಂ. ಎಸ್. ಭಟ್ ಡಿವಿಷನಲ್ ಮ್ಯಾನೇಜರ್, ಕೆ ವಿನಾಯಕ ರಾವ್ ಅಧ್ಯಕ್ಷ ಸೇವಾಭಾರತಿ , ಚರಣ್ ಕುಮಾರ್ ಫಂಡ್ ರೈಸಿಂಗ್ ಮ್ಯಾನೇಜರ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ LIC ವತಿಯಿಂದ ನಮ್ಮ ಕೇಂದ್ರಕ್ಕೆ ಅಗತ್ಯವಿರುವ ಒಂದು ಆಂಬುಲೆನ್ಸ್ ದೊರಕಿಸಿ ಕೊಡುವಂತೆ ಮನವಿ ಸಲ್ಲಿಸಲಾಯಿತು.

## ಉಡುಪಿಯಲ್ಲಿ ಪೂರ್ವಭಾವಿ ಸಭೆ

ಉಡುಪಿಯಲ್ಲಿ ಪ್ರಾರಂಭಗೊಳ್ಳಲಿರುವ ಸೇವಾಭಾರತಿಯ ಜಿಲ್ಲಾ ಕಾರ್ಯಾಲಯ ಸೇವಾನಿಕೇತನದ ಉದ್ಘಾಟನಾ ಸಮಾರಂಭದ ಕುರಿತು ಮಾರ್ಚ್ 14 ರಂದು ಪೂರ್ವಭಾವಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಕೆ ವಿನಾಯಕ ರಾವ್, ರಾಯನ್ ಫೆರ್ನಾಂಡಿಸ್, ವಿಜಯ ಕೊಡವೂರು, ಶ್ರೀಮತಿ ಲತಾ ಭಟ್, ಶ್ರೀಮತಿ ರೂಪಲಕ್ಷ್ಮಿ ಹಾಗೂ ಸೇವಾಭಾರತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು ಇದರ ಅಧ್ಯಕ್ಷರ ಭೇಟಿ

ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್ , ಮಂಗಳೂರು ಇದರ ಅಧ್ಯಕ್ಷರಾದ ಅರ್ಜುನ್ ಭಂಡಾರ್ಕರ್ ರನ್ನು ಮಾರ್ಚ್ 16 ರಂದು ಭೇಟಿ ಮಾಡಲಾಯಿತು. ಭೇಟಿಯ ಸಂದರ್ಭ ಸೇವಾಧಾಮದ ನಿರಂತರತೆಗಾಗಿ ಧನಕ್ರೋಢಿಕರಣದ ಭಾಗವಾಗಿ, ಸೇವಾಭಾರತಿಯು ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ನೀಡುವ ಸೇವೆಗಳ ಬಗ್ಗೆ ಫಂಡ್ ರೈಸಿಂಗ್ ಮೆನೇಜರ್ ಚರಣ್ ಕುಮಾರ್ ರವರು ಚುಟುಕಾಗಿ

ವಿವರಿಸಿ, ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ರವರು ಮನವಿಯನ್ನು ಸಲ್ಲಿಸಿದರು. ಶೀಘ್ರವಾಗಿ ಸ್ಪಂದಿಸಿದ ಈ ಟ್ರಸ್ಟ್‌ನ ಅಧ್ಯಕ್ಷರು ಮಾನವೀಯತೆಯ ಕಾರ್ಯಗಳಿಗೆ ಒಂದು ವರ್ಷದ ಅವಧಿಗೆ 50 ದಿವ್ಯಾಂಗರಿಗೆ ಬೇಕಾಗುವಷ್ಟು ವೈದ್ಯಕೀಯ ಕಿಟ್‌ಗಳನ್ನು ನೀಡಿ ಸಹಕರಿಸುವುದಾಗಿ ಭರವಸೆಯಿತ್ತರು.

## ವೈದ್ಯಕೀಯ ತಪಾಸಣಾ ಶಿಬಿರ



ಮಾರ್ಚ್ 17 ರಂದು ಎಸ್. ಡಿ. ಎಂ ಆಸ್ಪತ್ರೆ, ಉಜಿರೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ 13 ನೇ ವೈದ್ಯಕೀಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರವನ್ನು ಡಾ. ರಂಜನ್ ಕುಮಾರ್ ರವರು ಉದ್ಘಾಟಿಸಿ, ಫಲಾನುಭವಿಗಳಿಗೆ ಶುಭಹಾರೈಸಿದರು. ಅತಿಥಿಗಳಾಗಿ ಶ್ರೀ ಪಿ . ರಾಧಾಕೃಷ್ಣ ರಾವ್ ಅಧ್ಯಕ್ಷರು, ಶ್ರೀ ಸುಬ್ರಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ, ಶ್ರೀಮತಿ ರತ್ನಾವತಿ, ನೋಡಲ್ ಅಧಿಕಾರಿ, ಹಿರಿಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಳ್ತಂಗಡಿ ಇವರು ಉಪಸ್ಥಿತರಿದ್ದರು. ಇದರಲ್ಲಿ 11 ಜನ ಫಲಾನುಭವಿಗಳಿಗೆ ರಕ್ತದೊತ್ತಡ ಪರೀಕ್ಷೆ , ಸ್ಕ್ಯಾನಿಂಗ್, ಕ್ಷ ಕಿರಣ, ಕಣ್ಣಿನ ತಪಾಸಣೆ, ಫಿಸಿಯೋಥೆರಪಿ, ಗಾಲಿಕುರ್ಚಿ, ಕೌಶಲ್ಯ ತರಬೇತಿ, ಅರಿವು ಮೂಡಿಸುವ ಕಾರ್ಯಗಾರ, ಸ್ವಉದ್ಯೋಗಕ್ಕಾಗಿ ಪ್ರೇರಣೆ ಮತ್ತು ಮಾಹಿತಿಯನ್ನು ಒದಗಿಸಲಾಯಿತು. ಸಮಾರೋಪ ಸಮಾರಂಭದಲ್ಲಿ ಎಸ್.ಡಿ.ಎಂ. ಆಸ್ಪತ್ರೆಯ ಪಿ. ಆರ್. ಒ. ಆಗಿರುವ ಸಂಗೀತಾರವರು ಹಾಗೂ ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್‌ರವರು ಉಪಸ್ಥಿತರಿದ್ದರು. ಈ ಶಿಬಿರದ ಯಶಸ್ಸಿಗೆ ಸುಬ್ರಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬೆಳ್ತಂಗಡಿ, ಎ.ಪಿ.ಡಿ. ಬೆಂಗಳೂರು, ಕೆನರಾ ಸ್ಪೈನ್ ಫಾರಂ ಟ್ರಸ್ಟ್ ಮಂಗಳೂರು, ಎಸ್‌ಡಿಎಂ ಆಸ್ಪತ್ರೆ ಉಜಿರೆ, ಎಸ್.ಪಿ. ಆಯಿಲ್ ಉಜಿರೆ, ಇವರು ಸಹಭಾಗಿತ್ವ ನೀಡಿದರು.

## ಮೆಡಿಕಲ್ ಕಿಟ್ ವಿತರಣೆ



ಮಾರ್ಚ್ 19ರಂದು ಬಣಕಲ್ ನಿವಾಸಿಗಳಾದ ಬೆನ್ನುಹುರಿ ಅಪಘಾತಕ್ಕೊಳಗಾದ ಸೋಮೇಶ್ ಮತ್ತು ಮಂಜುನಾಥರನ್ನು ಭೇಟಿಮಾಡಿ, ಆರೋಗ್ಯ ವಿಚಾರಿಸಿ, ಅವರಿಗೆ ಬೆಡ್ ಸೋರ್ ಕಿಟ್ ಗಳನ್ನು ವಿತರಿಸಿದೆವು. ಭೇಟಿಯ ಸಂದರ್ಭ ಸೇವಾಭಾರತಿಯ ಅಧ್ಯಕ್ಷರಾದ ವಿನಾಯಕ ರಾವ್ ಹಾಗೂ ಕಾರ್ಯಕ್ರಮ ಸಂಯೋಜಕರಾದ ಆಶ್ರೀತ್ ಸಿ.ಪಿ. ಮತ್ತು ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್, ಆಪ್ತಸಮಲೋಚಕಿ ಜೋಸ್ಫಿನಾರವರು ಉಪಸ್ಥಿತರಿದ್ದರು. ತದನಂತರ ಚಿಕ್ಕಮಗಳೂರು ಜಿಲ್ಲಾ ವಿಕಚೇತನರ ಹಾಗೂ ಕಲ್ಯಾಣಾಧಿಕಾರಿಯವರ ಭೇಟಿ. ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿಗಳ ಕಛೇರಿ ಗೆ ಭೇಟಿ ಮಾಡಿ DDWO, ಚರಣ್ ರಾಜ್ ರವರೊಂದಿಗೆ ಬೆನ್ನು ಹುರಿ ಅಪಘಾತಕ್ಕೊಳಗಾದವರಿಗೆ ಸೇವಾಭಾರತಿಯ ಸೇವೆಗಳ ಬಗ್ಗೆ ಚುಟುಕಾಗಿ ಅಧ್ಯಕ್ಷರಾದ ಕೆ. ವಿನಾಯಕ ರಾವ್ ರವರು ವಿವರಿಸಿದರು. ಹಾಗೂ ಜಿಲ್ಲೆಯಲ್ಲಿರುವ ಬೆನ್ನುಹುರಿ ಅಪಘಾತಕ್ಕಕ್ಕೊಳಗಾದ ದಿವ್ಯಾಂಗರ ಅಂಕಿಅಂಶಗಳ ಪಟ್ಟಿ ಪಡೆಯಲು ತಾಲೂಕಿನ MRW ಗಳ ಸಭೆಯಲ್ಲಿ ಪ್ರಸ್ತಾಪಿಸಬೇಕಾಗಿ ವಿನಂತಿಸಿದೆವು.

## ಶಾಸಕರ ಭೇಟಿ



ಮಾರ್ಚ್ 20ರಂದು ಮೂಡಿಗೆರೆ ತಾಲೂಕಿನ ಮಾನ್ಯ ಶಾಸಕರಾದ, ಕುಮಾರ ಸ್ವಾಮಿಯವರನ್ನು ಭೇಟಿಮಾಡಲಾಯಿತು. ಭೇಟಿಯ ಸಂದರ್ಭ ಸೇವಾಭಾರತಿ ಹಾಗೂ ಸೇವಾಧಾಮದ

ಕಾರ್ಯ ಚಟುವಟಿಕೆಗಳ ಹಾಗೂ ಸೇವೆಗಳ ಬಗ್ಗೆ ಚುಟುಕಾಗಿ ಸೇವಾಭಾರತಿಯ ಅಧ್ಯಕ್ಷ ವಿನಾಯಕ ರಾವ್ ರವರು ವಿವರಿಸಿದರು. ಹಾಗೆಯೇ ಮೂಡಿಗೆರೆ ವ್ಯಾಪ್ತಿಯಲ್ಲಿರುವ ಬೆನ್ನುಹುರಿ ಅಪಘಾತ ಕ್ಕೊಳಗಾದವರ ಅಂಕಿಅಂಶ ಹಾಗೂ ಅವರಿಗೆ ಅರಿವು ಮೂಡಿಸುವ ಕಾರ್ಯಗಾರವನ್ನು ಏರ್ಪಡಿಸುವ ನಿಟ್ಟಿನಲ್ಲಿ ಸಹಕಾರವನ್ನು ಕೋರಲಾಯಿತು. ಆ ವೇಳೆ ಫಂಡ್ ರೈಸಿಂಗ್ ಮೆನೇಜರ್ ಆದ ಚರಣ್ ಕುಮಾರ್, ಕಾರ್ಯಕ್ರಮ ಸಂಯೋಜಕರಾದ ಆಶ್ರೀತ್ ಸಿ.ಪಿ., ಆಪ್ತಸಮಾಲೋಚಕಿ ಜೋಸ್ಫಿನ ಪಿ. ಟಿ. ಇವರು ಉಪಸ್ಥಿತರಿದ್ದರು.

## ಸೇವಾಧಾಮಕ್ಕೆ ಎ.ಪಿ.ಡಿ ಸಂಸ್ಥೆಯಿಂದ ಭೇಟಿ



ಎ.ಪಿ.ಡಿ ಬೆಂಗಳೂರಿನ ಹೇಮಂತ್ ಮಾರ್ಚ್ 21ರಂದು ಸೇವಾಧಾಮಕ್ಕೆ ಭೇಟಿ ನೀಡಿದರು. ಅಲ್ಲಿನ ಸನಿವಾಸಿಗಳೊಂದಿಗೆ ಆಪ್ತ ಸಮಾಲೋಚನೆ ನಡೆಸಿದರು.

## ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಾಗಾರ




ಸೇವಾಭಾರತಿ ಕನ್ಯಾಡಿ ಇದರ ಸೇವಾಧಾಮ ಪುನಶ್ಚೇತನ ಕೇಂದ್ರದ ವತಿಯಿಂದ ಮಾರ್ಚ್ 24ರಂದು ರೋಟರಿ ಕ್ಲಬ್ ಚಿಕ್ಕಮಗಳೂರು ಇದರ ಪ್ರಮುಖರಿಗೆ ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆ ಬಗ್ಗೆ ಮಾಹಿತಿ ಕಾರ್ಯಾಗಾರವು ಒಐಗಿ ರೋಟರಿ ಕ್ಲಬ್ ಹಾಲ್‌ನಲ್ಲಿ ಸೇವಾಭಾರತಿಯ ಕಾರ್ಯಕ್ರಮ ಸಂಯೋಜಕರದ ಅಶ್ರಿತ್ ಸಿ.ಪಿ. ಮಾಹಿತಿ ನೀಡಿದರು.ಮತ್ತು ಸೇವಾಭಾರತಿಯ ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್ ಎಮ್ ಇವರು ಸೇವಾಕಾರ್ಯಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋ. ಸಮೃದ್ ಪೈ ಮತ್ತು ಕಾರ್ಯದರ್ಶಿ ನಾಗ ಸಾಥ್ವಿಕ್ ಹಾಗೂ ರೋಟರಿ ಕ್ಲಬ್‌ನ ಸದಸ್ಯರು ಉಪಸ್ಥಿತರಿದ್ದರು. ಚಿಕ್ಕಮಗಳೂರು ಜಿಲ್ಲೆಯ 52 ಜನ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರಿಗೆ ಮುಂದಿನ ದಿನಗಳಲ್ಲಿ ಸಹಾಯ ಮಾಡುತ್ತೇವೆಂದು ಚಿಕ್ಕಮಗಳೂರು ರೋಟರಿ ಕ್ಲಬ್ ವತಿಯಿಂದ ಭರವಸೆ ದೊರೆಯಿತು. ಈ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ನ ಪ್ರಮುಖರು ಮತ್ತು ಸೇವಾಭಾರತಿಯ ಕಾರ್ಯಕರ್ತರು ಭಾಗವಹಿಸಿದರು.

## 14ನೇ ಅರೋಗ್ಯ ತಪಾಸಣಾ ಶಿಬಿರ –ಅರಿವು ಕಾರ್ಯಾಗಾರ



ಸರಕಾರಿ ತಾಲೂಕು ಆಸ್ಪತ್ರೆ ಬೆಳ್ತಂಗಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ 14ನೇ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಮತ್ತು ಅರಿವು ಕಾರ್ಯಗಾರವನ್ನು ಮಾರ್ಚ್ 24ರಂದು ಆಯೋಜಿಸಲಾಗಿತ್ತು. ಇದರಲ್ಲಿ 6 ಜನ ಫಲಾನುಭವಿಗಳಿಗೆ ರಕ್ತದೊತ್ತಡ ಪರೀಕ್ಷೆ, ಸ್ಕ್ಯಾನಿಂಗ್, ಕ್ಷಕಿರಣ, ಕಣ್ಣಿನ ತಪಾಸಣೆ, ಹಲ್ಲಿನ ತಪಾಸಣೆ, ಫಿಸಿಯೋಥೆರಪಿ, ಆಪ್ತಸಮಲೋಚನೆ ನೀಡಲಾಯಿತು. ಈ ಶಿಬಿರವನ್ನು, ಬೆಳ್ತಂಗಡಿ ತಾಲೂಕು ವೈದ್ಯಾಧಿಕಾರಿಯವರಾದ ಡಾ. ವಿದ್ಯಾವತಿ ಇವರು ಉದ್ಘಾಟಿಸಿದರು. ಶ್ರೀ ಕೆ. ಪುರಂದರ ರಾವ್ ಸಂಚಾಲಕರು ಸೇವಧಾಮ, ಸೌತಡ್ಕ ಇವರು ಪ್ರಸ್ಥಾವಿಕ ನುಡಿಗಳನ್ನಾಡಿದರು. ಡಾ ಜಯದೀಪ್‌ರವರು ಉಪಸ್ಥಿತರಿದ್ದರು. ಅಖಿಲೇಶ್ ಕಾರ್ಯಕ್ರಮ ನಿರೂಪಿಸಿದರು. ಆಶ್ರೀತ್ ಸಿ.ಪಿ. ವಂದಿಸಿದರು.

## ಸೇವೆಗಳ ಹಸ್ತಾಂತರ (ಜನವರಿ 2022 – ಮಾರ್ಚ್ 2022)

**ನಮ್ಮ ಸಂಸ್ಥೆಯಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉಚಿತವಾಗಿ 22 ಗಾಲಿಕುರ್ಚಿಗಳು, 90 ಮೆಡಿಕಲ್ ಕಿಟ್‌ಗಳು, 6 ವಾಕರ್‌ಗಳು ಹಾಗೂ 2 ಹೊಲಿಗೆಯಂತ್ರಗಳನ್ನು ವಿತರಿಸಲಾಗಿದ್ದು 2 ಮಂದಿಗೆ ಶೌಚಾಲಯ, 7 ಮಂದಿಗೆ ಗಾಳಿಹಾಸಿಗೆ ಮತ್ತು ಒಬ್ಬರಿಗೆ ಇನ್ವರ್ಟರ್‌ಗಳಿಗೆ ಭಾಗಶಃ ಆರ್ಥಿಕ ಸಹಕಾರವನ್ನು ನೀಡಿರುತ್ತೇವೆ.**

### ಸೇವಾಧಾಮಕ್ಕೆ ದಿನಸಿ ಕಿಟ್‌ಗಳನ್ನು ನೀಡಿದವರ ಪಟ್ಟಿ

1) ಶ್ರೀ ದೀಪಕ್ ಕುಮಾರ್
2) ಹವ್ಯಕ ಮಂಡಲ, ಉಪ್ಪಿನಂಗಡಿ
3) ಶ್ರೀ ಕೃಷ್ಣ ಸವಿತಾ, ನೆಲ್ಲಿಕ್ಕಾರು, ಕಾರ್ಕಳ
4) ಶ್ರೀಮತಿ ಜೋಸ್ಫಿನ ಪಿ. ಟಿ.
5) ಶ್ರೀ ಸತೀಶ್ ಗೌಡ, ಸೌತಡ್ಕ
6) ಶ್ರೀ ಎಂ. ಲಕ್ಷ್ಮೀ ನಾರಾಯಣ ಭಟ್, ಉಜಿರೆ
7) ಶ್ರೀ ರವಿಕುಮಾರ್, ಶ್ರೀ ಮಹಾಗಪತಿ ವೆಜಿಟೇಬಲ್ಸ್ ಕೊಕ್ಕಡ

ಸೇವಾಧಾಮದ ವಾರ್ಷಿಕ ನಿರ್ವಹಣೆಗಾಗಿ ರೂ. 48 ಲಕ್ಷವನ್ನು ಹೊಂದಿಸಬೇಕಾಗಿದೆ.
ಈ ನಿಟ್ಟಿನಲ್ಲಿ ಉದಾರ ಸಹೃದಯಿಗಳ ಕೊಡುಗೆಗಳನ್ನು ನಿರೀಕ್ಷಿಸುತ್ತೇವೆ. ನಮ್ಮ ಸಂಸ್ಥೆಗೆ ನೀಡುವ ದೇಣಿಗೆಗಳಿಗೆ 80G ಸೌಲಭ್ಯವೂ ಲಭ್ಯವಿದೆ.

| | | | |
|---|---|---|---|
| A/c Name | : Sevabharathi | IFSC Code | : CNRB0010168 |
| A/c No. | : 01682200072637 | Bank & Branch | : Canara Bank, Kokkada |